

## ಶುಭಾಗೊಂದು ಪ್ರಬುದ್ಧ ಪಾತ್ರ

‘ನನ್ನ ಹತ್ತು ವರ್ಷಗಳ ವೃತ್ತಿ ಜೀವನದಲ್ಲಿ, ಮೂವತ್ತಕ್ಕೂ ಹೆಚ್ಚಿನ ಚಿತ್ರಗಳಲ್ಲಿ ಇಂಥ ಪಾತ್ರವನ್ನು ನಿರ್ವಹಿಸಿರಲಿಲ್ಲ. ಹೆಚ್ಚು ಏಕಾಗ್ರತೆಯನ್ನು ಬಯಸುವ ಪ್ರಬುದ್ಧ ಪಾತ್ರದಲ್ಲಿ ನಟಿಸುತ್ತಿರುವ ಕಲಾವಿದೆಯಾಗಿ ಖುಷಿ ತಂದುಕೊಟ್ಟಿದೆ’ – ಹೀಗೆ ಹೇಳಿದ್ದು ಶುಭಾ ಪೂಂಜ.

‘ಚಿತ್ರದಲ್ಲಿ ಶುಭಾ ಪೂಂಜ ಅವರದು ನಾಯಕಿಯ ಪಾತ್ರ. ಚಿತ್ರದುದ್ದಕ್ಕೂ ಅವರು ಸೀರೆಯಲ್ಲಿಯೇ ಕಾಣಿಸಿ ಕೊಳ್ಳುತ್ತಾರೆ. ದೀಪಕ್, ಅಮೃತಾ ರಾವ್, ಬೇಬಿ ವೈಷ್ಣವಿ. ಮುನಿ, ಸಂಪತ್ ಮುಂತಾದವರು ತಾರಾಗಣದಲ್ಲಿದ್ದಾರೆ’. ಹೀಗೆಂದು ಹೇಳಿದ್ದು ವಿ. ನಾಗೇಂದ್ರ ಪ್ರಸಾದ್.

ಇನ್ನೂ ಶೀರ್ಷಿಕೆ ಸ್ಪಷ್ಟವಾಗದ ಸಿನಿಮಾದ ಕುರಿತು ಶುಭಾ ಹಾಗೂ ನಾಗೇಂದ್ರಪ್ರಸಾದ್ ನೀಡಿದ ಮಾಹಿತಿ ಔಪಚಾರಿಕತೆಗಷ್ಟೆ ಸೀಮಿತವಾಗಿತ್ತು. ಸುದ್ದಿಗೋಷ್ಠಿಯಲ್ಲಿ ಅವರು ಸ್ಪಷ್ಟಪಡಿಸಲು ಉದ್ದೇಶಿಸಿದ್ದು – ‘ತಮ್ಮಿಬ್ಬರಿಗೂ ಮದುವೆಯಾಗಿಲ್ಲ’ ಎನ್ನುವ ಸಂಗತಿಯನ್ನು. ಅವರಿಬ್ಬರೂ ಮದುವೆ ಪೋಷಾಕಿನಲ್ಲಿದ್ದ ಫೋಟೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಆ ಗೊಂದಲವನ್ನು ನಿವಾಸಿರುವ ಉದ್ದೇಶದಿಂದ ಪತ್ರಕರ್ತರ ಮುಂದೆ ನಿಂತಿದ್ದರು.

‘ಸಿನಿಮಾದ ದೃಶ್ಯವನ್ನು ಯಾರೋ ಕಿಡಿಗೇಡಿಗಳು ಮೊಬೈಲ್‌ನಲ್ಲಿ ಕ್ಲಿಕ್ಕಿಸಿ ಈ ಗೊಂದಲ ಸೃಷ್ಟಿಸಿದ್ದಾರೆ’ ಎಂದು ನಾಗೇಂದ್ರಪ್ರಸಾದ್ ಬೇಸರ ಮಾಡಿಕೊಂಡರು. ‘ಎಲ್ಲರಿಗೂ ಹೇಳಿಯೇ ಮದುವೆ ಆಗುವ ಗಟ್ಟಿಗಿತ್ತಿ ನಾನು’ ಎಂದರು ಶುಭಾ. ಮದುವೆಯ ಸುಳ್ಳು–ವದಂತಿ ಅದೇನೇ ಇರಲಿ, ಫೋಟೊದಲ್ಲಿನ ಜೋಡಿ ಸುಂದರವಾಗಿ ಇರುವುದಂತೂ ನಿಜ.





## ‘ಶೆಟ್ಟಿ’ದ್ವಯರ ಹೊಸ ಕಿರಿಕ್

ರಿಷಬ್ ಮತ್ತು ರಕ್ಷಿತ್ – ‘ಶೆಟ್ಟಿ’ದ್ವಯರು ನಿಂತಲ್ಲಿ ನಿಲಲಾಗದಂತೆ ವೇದಿಕೆಯ ತುಂಬ ಓಡಾಡುತ್ತಿದ್ದರು. ಅವರ ಉತ್ಸಾಹಕ್ಕೆ ಇಂಬು ನೀಡುವಂತೆ ಉಪೇಂದ್ರ ಸುಳಿದಾಡುತ್ತಿದ್ದರು. ಮೂವರೂ ಒಟ್ಟಾಗಿದ್ದುದು ‘ಕಿರಿಕ್ ಪಾರ್ಟಿ’ ನೆಪದಲ್ಲಿ.

‘ಕಿರಿಕ್ ಪಾರ್ಟಿ’ ಎಂದರೆ ಗೆಳೆಯರ ಸಂತೋಷಕೂಟವಲ್ಲ. ಅದು ‘ಸಿನಿಮಾ’ದ ಹೆಸರು. ರಿಷಬ್ ನಿರ್ದೇಶನದಲ್ಲಿ ರಕ್ಷಿತ್ ನಾಯಕ ಪಾತ್ರದಲ್ಲಿ ನಟಿಸಿರುವ ಚಿತ್ರ. ಗೆಳೆಯರಿಬ್ಬರ ಎಂಜಿನಿಯರಿಂಗ್ ದಿನಗಳ ಅನುಭವ ಕಥನ ಹಾಗೂ ತೆರೆಯಾಚೆಗಿನ ‘ಕಿರಿಕ್’ಗಳೆಲ್ಲ ಚಿತ್ರದಲ್ಲಿ ಇವೆಯಂತೆ. ಈ ಚಿತ್ರದ ಟ್ರೇಲರ್ ಬಿಡುಗಡೆ ಮಾಡಿದ ಉಪೇಂದ್ರ ಚಿತ್ರತಂಡಕ್ಕೆ ಶುಭ ಕೋರಿದರು.

ರಿಷಬ್–ರಕ್ಷಿತ್ ಇಬ್ಬರೂ ಉಪೇಂದ್ರ ಅವರ ದೊಡ್ಡ ಅಭಿಮಾನಿಗಳು. ‘ಉಪೇಂದ್ರ ಒಂದು ದೊಡ್ಡ ವೃಕ್ಷ’ ಎಂದು ಬಣ್ಣಿಸಿದ ಗೆಳೆಯರು, ಆ ಮಹಾಮರವನ್ನು ತಾವು ಸೇರಿದಂತೆ ತರುಣ ಪೀಳಿಗೆಯ ಅನೇಕರು ಯಾವಾಗಲೂ ಆಶ್ಚರ್ಯದಿಂದ ನೋಡುತ್ತಿರುತ್ತೇವೆ ಎಂದರು. ಉಪೇಂದ್ರ ಅವರಂತೆ ರಿಷಬ್ ಕೂಡ ನಿರ್ದೇಶಕನಾಗುವ ಆಸೆಯಿಂದ ಊರು ಬಿಟ್ಟು ಬೆಂಗಳೂರಿಗೆ ಬಂದವರಂತೆ. ಹೀಗೆ ಗುರುಸಮಾನರಾದ ಉಪೇಂದ್ರ ಅವರಿಂದ ಚಿತ್ರದ ಟ್ರೇಲರ್ ಬಿಡುಗಡೆ ಮಾಡಿಸಿದ ಪುಲಕ ಅವರದು.

ಕಿರಿಯರ ಅಭಿಮಾನ ಸ್ವೀಕಾರದ ರೋಮಾಂಚನದಲ್ಲಿದ್ದ ಉಪೇಂದ್ರ, ತಮ್ಮ ಕಾಲೇಜು ದಿನಗಳನ್ನು ನೆನಪಿಸಿಕೊಂಡರು. ತಮ್ಮನ್ನು ‘ಮಹಾಮರ’ ಎಂದು ಬಣ್ಣಿಸಿದ ಗೆಳೆಯರು ಮುಂದಿನ ದಿನಗಳಲ್ಲಿ ಬೇರುಗಳನ್ನು ಪತ್ತೆ ಹಚ್ಚುವುದೇ ಕಷ್ಟವಾಗುವಷ್ಟು ಬೃಹತ್ ಮರವಾಗಿ ಬೆಳೆಯಲಿದ್ದಾರೆ ಎಂದರು.

‘ಕಿರಿಕ್ ಪಾರ್ಟಿ’ ಪ್ರೇಕ್ಷಕರ ಪಾಲಿಗೆ ಒಂದು ರಸವತ್ತಾದ ಪಯಣವಾಗಿ ಪರಿಣಮಿಸಲಿದೆ ಎನ್ನುವ ವಿಶ್ವಾಸ ನಿರ್ದೇಶಕರದು. ಸಂಯುಕ್ತಾ ಹೆಗಡೆ, ರಶ್ಮಿಕಾ ತಾರಾಣದಲ್ಲಿರುವ ಪ್ರಮುಖರು.

■ ರಘು